ಸಂಜ್ಞೆ ಮಾಡಿದ.

'ಈಗ ಸರಿಯಾಯ್ತು ಬಿಡು!' ನಾನು ಉದ್ಧರಿಸಿದೆ.

ಅವನು ನಮ್ಮನ್ನು ಹಿಂದಿಕ್ಕಿದ್ದಾನೆಂದರೆ ಖಂಡಿತವಾಗಿಯೂ ನೂರಾಮೂವತ್ತು ಮೈಲಿ ವೇಗದಲ್ಲೇ ಬಂದಿರಬೇಕು! ನಾನು ಅವನ ಬಳಿ ಕಾರು ನಿಲ್ಲಿಸಿದೆ.

'ಪೊಲೀಸ್ ಬೈಕುಗಳು ಇಷ್ಟೊಂದು ವೇಗದಲ್ಲಿ ಓಡುತ್ತವೆಂದು ನಾನು ಊಹಿಸಿರಲಿಲ್ಲ!' ನಾನೆಂದೆ ಮುಖ ಸಪ್ಪಗಾಗಿಸುತ್ತಾ.

'ನನ್ನ ಬೈಕು ಕೂಡ ನಿನ್ನ ಜಾತಿಯದ್ದೇ... ಬಿಎಂಡಬ್ಲ್ಯು R90S. ಫಾಸ್ಟೆಸ್ಟ್ ಬೈಕ್.'

ಅವನು ಬೈಕನ್ನು ಅಡ್ಡ ಸ್ಟ್ಯಾಂಡಿನ ಮೇಲೆ ನಿಲ್ಲಿಸಿ ಬಹಳ ಜಾಗರೂಕತೆಯಿಂದ ತನ್ನ ಕೈಗವಸುಗಳನ್ನು ತೆಗೆದು ಸೀಟಿನ ಮೇಲೆ ಇಟ್ಟ. ಅವನಿಗೆ ಏನೂ ಅವಸರವಿರಲಿಲ್ಲ. ನಾವು ಅವನ ಕೈಗೆ ಸಿಕ್ಕಿಬಿದ್ದ ಇಲಿಗಳಂತಾಗಿದ್ದೆವು ಮತ್ತು ಅವನು ಇದನ್ನು ಚೆನ್ನಾಗಿಯೇ ಅರಿತಿದ್ದ.

'ನೀವು ಎಂತಾ ಅಪಾಯದೊಳಗೆ ಸಿಕ್ಕಿಹಾಕಿಕೊಂಡಿದ್ದೀರೆಂಬ ಅರಿವು ನಿಮಗೆ ಇರುವಂತೆ ಕಾಣಿಸುತ್ತಿಲ್ಲ' ಅವನು ಸಾಕ್ಷಾತ್ ಬೆಕ್ಕಿನಂತೆಯೇ ಕಾಣಿಸುತ್ತಿದ್ದ.

'ಅವನ ಬಳಿ ಅಗತ್ಯವಿದ್ದಷ್ಟು ಮಾತ್ರ ಮಾತನಾಡು. ಹೆಚ್ಚಿಗೆ ಏನೂ ಹೇಳಲೂ ಹೋಗಬೇಡ' ಎಂದು ನನ್ನ ಸಹಪ್ರಯಾಣಿಕ ಎಚ್ಚರಿಕೆ ಕೊಟ್ಟ.

ಅವನು ನಿಧಾನವಾಗಿ ಕಾರಿನ ಕಿಟಕಿಯ ಬಳಿ ಬಂದ. ಶಾರೀರಿಕವಾಗಿ ಅವನು ಧಡೂತಿಯಾಗಿದ್ದ. ದೊಡ್ಡ ಹೊಟ್ಟೆಯನ್ನೂ ಬೆಳೆಸಿಕೊಂಡಿದ್ದ. ಅವನ ಕುಂಬಳಕಾಯಿ ಗಾತ್ರದ ಮುಖ ಮಾಗಿದ ಟೊಮೆಟೊ ಹಣ್ಣಿನಂತೆ ಹೊಳೆಯುತ್ತಿತ್ತು. ನಮ್ಮದು, ಹೆಡ್‌ಮಾಸ್ಟರರ ಮುಂದೆ ಕೈಕಟ್ಟಿ ನಿಂತಿದ್ದ ಉಡಾಳ ಹುಡುಗರ ಸ್ಥಿತಿಯಾಗಿತ್ತು.

'ಇವನ್ಯಾಕೋ ನನಗೆ ಸರಿ ಕಾಣುತ್ತಿಲ್ಲ. ತೊಂದರೆ ಕೊಡುವವನಂತೆ ಕಾಣಿಸುತ್ತಿದ್ದಾನೆ' ಎಂದು ಸಣಕಲ ಹೇಳಿದ.

ಪೊಲೀಸ್ ಆಫೀಸರ್ ತನ್ನ ಬಲಿಷ್ಠವಾದ ಮೊಣಕೈಯನ್ನು ಕಾರಿನ ಕಿಟಕಿಯ ಮೇಲಿಟ್ಟು ನನ್ನನ್ನು ದಿಟ್ಟಿಸಿ, 'ಏನು ಅಷ್ಟೊಂದು ಅವಸರ?' ಎಂದ.

'ಹೀ...ಗೇ ಆಫೀಸರ್... ಅವಸರವೇನಿಲ್ಲ' ಎಂದೆ.

'ಹಿಂಬದಿಯಲ್ಲೇನಾದ್ರೂ ಹೆರಿಗೆ ನೋವು ಅನುಭವಿಸುತ್ತಿರುವ ಹೆಂಗಸಿದ್ದಾಳೇನು? ಆಸ್ಪತ್ರೆಗೆ ಹೋಗುತ್ತಿದ್ದಿರಬೇಕು ಅಂತ ಕಾಣಿಸುತ್ತೆ?'

'ಹಾಗೇನಿಲ್ಲ ಆಫೀಸರ್.'

'ಹಾಗಾದ್ರೆ ಮನೆಗೆ ಬೆಂಕಿ ಬಿದ್ದಿರಬೇಕು? ನಂದಿಸಲು ದೌಡಾಯಿಸುತ್ತಿದ್ದಿರಬೇಕು?'

'ಹಾಗೆನಿಲ್ಲ ಆಫೀಸರ್.'

'ಹಾಗಾದ್ರೆ ನೀವು ದೊಡ್ಡ ಅಪಾಯದಲ್ಲಿ ಸಿಕ್ಕಿಬಿದ್ದಿದ್ದೀರಿ ಜೆಂಟಲ್‌ಮೆನ್! ಈ ರಸ್ತೆಯಲ್ಲಿ ವೇಗಮಿತಿ ಎಷ್ಟಿದೆ ಎಂಬುದು ಗೊತ್ತೆ?'

'ಎಪ್ಪತ್ತು ಮೈಲು' ನಾನು ಹೇಳಿದೆ.

'ನೀನು ಎಷ್ಟರಲ್ಲಿದ್ದೆ ಎಂಬುದನ್ನು ಹೇಳುವೆಯಾ ತಮ್ಮಾ?'

ನಾನು ಭುಜಗಳನ್ನು ಕುಣಿಸಿ ತೆಪ್ಪಗಾದೆ.

'ನೂರಾಇಪ್ಪತ್ತು ಮೈಲುಗಳು!!' ಅವನು ಎಷ್ಟು ಜೋರಾಗಿ ಹೇಳಿದನೆಂದರೆ ನಾನು ಒಮ್ಮೆಲೇ ಬೆಚ್ಚಿಬಿದ್ದೆ. 'ಲಿಮಿಟ್‌ಗಿಂತ ಐವತ್ತು ಮೈಲು ಜಾಸ್ತಿ!' ಮುಖವನ್ನು ತಿರುಗಿಸಿ ಅವನು